# ನಿಂತಿದೆ ಬುಲೆಟ್ ಶಬ್ದ



## ಅಗಲಿದ ನಗುವಿನ ಮುಗ್ಧ

350ಕ್ಕೂ ಹೆಚ್ಚಿನ ಸಿನಿಮಾಗಳಲ್ಲಿ ನಟಿಸಿ, ನಕ್ಕು ನಗಿಸಿದ್ದ ಬುಲೆಟ್ ಪ್ರಕಾಶ್ ಅವರ 'ಆ್ಯಕ್ಟಿಂಗ್ ರೈಡ್' ಏಪ್ರಿಲ್ 6ರಂದು ಕೊನೆಗೊಂಡಿದೆ. ವಿಶಿಷ್ಟ ಮ್ಯಾನರಿಸಂ, ಡೈಲಾಗ್ ಡೆಲಿವರಿಗಳಿಂದ ತೆರೆಯ ಮೇಲೂ, ಸ್ನೇಹಪರ ಸ್ವಭಾವದಿಂದ ತೆರೆಯ ಆಚೆಯೂ ಸಾಕಷ್ಟು ಜನರ ಪ್ರೀತಿ ಗಳಿಸಿದ್ದ ಪ್ರಕಾಶ್ ಕುರಿತು ಚಲನಚಿತ್ರ ಸಂಭಾಷಣೆಗಾರ, ನಟ ಮಾಸ್ತಿ ಬರೆದ ಆಪ್ತಬರಹ ಇಲ್ಲಿದೆ.



### ಸಂದರ್ಭ 1

ಸಿನಿಮಾದಲ್ಲಿ ಸಾಧು ಕೋಕಿಲ ಮತ್ತು ಬುಲೆಟ್ ಪ್ರಕಾಶ್ ಇಬ್ಬರೂ ಇದ್ದಾರೆ ಅಂದ್ರೆ ಸಾಕು, ಥಿಯೇಟರ್‌ಗೆ ಜನ ಮುಗಿಬಿದ್ದು ನೋಡುತ್ತಿದ್ದ ಕಾಲವದು. ಒಬ್ಬ ದೊಡ್ಡ ನಿರ್ಮಾಪಕರು ಸಾಧು ಹತ್ತಿರ ಬಂದು, 'ಸಾರ್, ನೀವು ಮತ್ತೆ ಬುಲೆಟ್ ಕಾಂಬಿನೇಷನ್ ಸಿನಿಮಾ ಮಾಡ್ಬೇಕು ಅಂತಿದೀನಿ. ಡೇಟ್ಸ್ ಬೇಕು. ಒಂದು ಪೇಮೆಂಟ್ ಹೇಳಿ?' ಎಂದು ಕೇಳ್ತಾರೆ. ಸಾಧು ಒಂದು ಒಳ್ಳೆಯ ಪೇಮೆಂಟ್ ಮಾತಾಡಿ ಫೈನಲ್ ಮಾಡ್ಕೋತಾರೆ. ನಿರ್ಮಾಪಕರು ಸಾಧುಗೆ 'ಸಾರ್, ಹಂಗೇ ಬುಲೆಟ್ ಹತ್ತಿರ ನೀವೇ ಮಾತಾಡ್ಬಿಡಿ' ಎಂದು ಗೋಗರೀತಾರೆ. ಸಾಧು ಬುಲೆಟ್‌ಗೆ ಅಲ್ಲಿಂದಲೇ ಫೋನ್ ಮಾಡಿ, 'ಪ್ರಕಾಶ್, ನಮ್ಮಿಬ್ರ ಕಾಂಬಿನೇಷನ್ನಲ್ಲಿ ಒಂದು ಸಿನಿಮಾ ಮಾಡ್ತಾರಂತೆ. ಪ್ರೊಡ್ಯೂಸರ್ ಇಲ್ಲೇ ಕೂತಿದಾರೆ. ಇಷ್ಟು ದಿನ ಬರುತ್ತೆ, ಏನ್ ಪೇಮೆಂಟ್ ತಗೋತೀಯ' ಎಂದು ಕೇಳ್ತಾರೆ. ಬುಲೆಟ್ ಆ ಕಡೆಯಿಂದ 'ಜಾಸ್ತಿ ಏನ್ ಬೇಡ... ನೀನ್ ಏನ್ ತಗೋತೀಯೋ ಅದನ್ನೇ ಕೊಡಿಸ್ಬಿಡು ಗುರು' ಅಂತಾರೆ. ಸಾಧು ಮನಸ್ಸಲ್ಲಿ 'ಎಲಾ ಕಿಲಾಡಿ!' ಅನ್ಕೊಂಡು 'ಆಯ್ತುಪ್ಪಾ' ಎಂದು ನಿರ್ಮಾಪಕರ ಹತ್ರ ಮಾತಾಡ್ತಾರೆ.

### ಸಂದರ್ಭ 2

'ಪಾಗಲ್' ಅಂತ ಒಂದು ಸಿನಿಮಾ. ಪಿ.ಎನ್. ಸತ್ಯ ನಿರ್ದೇಶಕರು. ಅವರೇ ಹೀರೊ, ಅವರೇ ನಿರ್ಮಾಪಕರೂ ಹೌದು. ಬುಲೆಟ್‌ಗೆ ಫೋನ್ ಮಾಡಿ ಮೂರು ದಿನ ಡೇಟ್ಸ್ ಬೇಕು ಅಂತಾರೆ. ಬುಲೆಟ್ 'ಆಯ್ತು' ಅಂತ ಒಪ್ಕೊಂಡು ಬಂದು ಆ್ಯಕ್ಟ್ ಮಾಡಿ ಹೋಗ್ತಾರೆ. ಚಿತ್ರದ ಶೂಟಿಂಗ್ ಮುಗಿಸಿದ ಮೇಲೆ ಸತ್ಯ ಒಂದಷ್ಟು ಹಣವನ್ನು ಕೈಯಲ್ಲಿ ಹಿಡಿದು ಬುಲೆಟ್‌ಗೆ ಕೊಡಲು ಹೋಗ್ತಾರೆ. ಆಗ ಬುಲೆಟ್ 'ಗುರು, ನೀನು ದರ್ಶನ್ ಅಂಥ ಹೀರೋನ ಇಂಡಸ್ಟ್ರಿಗೆ ಕೊಟ್ಟೋವ್ನು. ಇವತ್ತು ಅವರಿಂದ ನೂರು ಜನ ಊಟ ಮಾಡ್ತಿದಾರೆ. ನೀನು ಪ್ರೊಡ್ಯೂಸರ್ ಆಗಿ ಈ ಸಿನಿಮಾ ಮಾಡ್ತಿದೀಯ. ನಿನ್ ಕಷ್ಟ ಏನು ಅಂತ ನಂಗೊತ್ತು. ನನಗೆ ಒಂದು ರೂಪಾಯಿ ಬೇಡ ಗುರೂ, ಪಿಕ್ಚರ್ ರಿಲೀಸ್ ಆಗಿ ಚೆನ್ನಾಗಿ ಆದ್ರೆ ನಾನೇ ಕೇಳಿ ತಗೋತೀನಿ' ಎಂದು ಕಳಿಸ್ತಾರೆ.

ಹೀಗೆ ಇರುವವರ ಹತ್ರ ಇಸ್ಕೊಂಡು, ಇಲ್ಲದವರಿಗೆ ಸಹಾಯ ಮಾಡ್ಕೊಂಡು ಇರುತ್ತಿದ್ದುದು ಬುಲೆಟ್ ಪ್ರಕಾಶ್ ವ್ಯಕ್ತಿತ್ವ. ದರ್ಶನ್, ಶಿವರಾಜ್‌ಕುಮಾರ್ ಸಿನಿಮಾಗಳಲ್ಲಿ ಸಣ್ಣ ಪುಟ್ಟ ಪಾತ್ರಗಳಲ್ಲಿ ನಟಿಸುತ್ತಿದ್ದ ಬುಲೆಟ್ ಪ್ರಕಾಶ್ ಅನ್ನೋ ಸಣ್ಣ ವಯಸ್ಸಿನ ಹಾಸ್ಯ ನಟನೊಬ್ಬ ನೋಡನೋಡುತ್ತಿದ್ದಂತೆ ಅದೇ ಸ್ಟಾರ್‌ಗಳ ಸಂಭಾವನೆ ಮಾತಾಡಿ ಅಡ್ವಾನ್ಸ್ ಕೊಡೋ ಮಟ್ಟಕ್ಕೆ ಬೆಳೀತಾನೆ; ಚಿತ್ರ ನಿರ್ಮಾಣಕ್ಕಿಳೀತಾನೆ ಅಂದ್ರೆ ಸುಲಭದ ಮಾತಲ್ಲ.

ತೆರೆಯ ಮೇಲೆ ನಗಿಸುವ ಕೆಲಸ ತುಂಬಾ ಕಷ್ಟದ್ದು. ಹಾಸ್ಯ ಸ್ವಲ್ಪ ವ್ಯತ್ಯಯ ಅದ್ರೂ